1	2	3	4	5	6
22.	ಕೆ. ಶ್ರೀಧರ್	2214	ಲೈಮ್ ಸ್ಟೋನ್	17.04.1996 20 ವರ್ಷ	2.02 ಹೆಕ್ಟೇರ್
23.	ಹೆಚ್.ಆರ್.ಉಯ ಕುಮಾರ್	2267	ಲೈಮ್ ಸ್ಟೋನ್	07.03.2000 20 ವರ್ಷ	2.02 ಹೆಕ್ಟೇರ್

ಹಾಸನ –ಮಂಗಳೂರು ರೈಲ್ವೆ ಯೋಜನೆ ಕಾಮಗಾರಿ

285 (234): ಶ್ರೀ ಯೋಗೀಶ್‌ಭಟ್ ಎನ್. (ಮಂಗಳೂರು) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ–ಮಂಗಳೂರು ರೈಲ್ವೆ ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳ್ಳುವುದು;

ಆ) ಇದಕ್ಕಾಗಿ ಬಜೆಟ್‌ನಲ್ಲಿ ನೀಡಿರುವ ಹಣವೆಷ್ಟು; ಕೇಂದ್ರದಿಂದ ಬಂದ ಹಣವೆಷ್ಟು; ವಿವರ ನೀಡುವುದು;

ಇ) ರಾಜ್ಯದ ಪಾಲನ್ನು ಸರಿಯಾಗಿ ನೀಡಿಲ್ಲವೆಂಬುದು ನಿಜವೇ; ರಾಜ್ಯ ಸರ್ಕಾರ ಎಷ್ಟು ಹಣ ನೀಡಿದೆ; ಎಷ್ಟು ಬಾಕಿ ಹಣ ನೀಡಬೇಕಾಗಿದೆ; ವಿಳಂಬಕ್ಕೆ ಕಾರಣಗಳೇನು;

ಈ) ಮಂಗಳೂರಿನ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿ ಯಾವ ಹಂತದಲ್ಲಿದೆ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಾಗರೀಕ ವಿಮಾನಯಾನ ಸಚಿವರು) :

ಅ) ಮಂಗಳೂರು ಕನಕಪುರ–ಕಬಕಪುತ್ತೂರು ವಿಭಾಗದ ಕಾಮಗಾರಿ ಮುಗಿದಿದೆ. ಕಬಕಪುತ್ತೂರು–ಸುಬ್ರಮಣ್ಯ ಮತ್ತು ಸುಬ್ರಮಣ್ಯ–ಸಕಲೇಶಪುರ ವಿಭಾಗಗಳ ಕಾಮಗಾರಿ ಪ್ರಗತಿಯಲ್ಲಿದೆ. ಸಂಪೂರ್ಣ ಕಾಮಗಾರಿಯು ಮಾರ್ಚ್ 2005ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಆ) 2003–04ನೇ ಸಾಲಿಗೆ ಈ ಯೋಜನೆಗೆ ರೂ. 10.50 ಕೋಟಿಗಳನ್ನು ರಾಜ್ಯದ ಆಯವ್ಯಯದಲ್ಲಿ ಒದಗಣಿ ಮಾಡಲಾಗಿದೆ. ಇದುವರೆವಿಗೂ ರೂ. 7.00 ಕೋಟಿಗಳನ್ನು ರಾಜ್ಯವು ಬಿಡುಗಡೆ ಮಾಡಿದೆ. ರೈಲ್ವೆ ಮಂತ್ರಾಲಯವು ರೂ. 42.85 ಕೋಟಿಗಳನ್ನು ಇದುವರೆವಿಗೂ ವೆಚ್ಚ ಮಾಡಿದೆ.

ಇ) ಕರ್ನಾಟಕ ಸರ್ಕಾರವು ಒಟ್ಟಾರೆಯಾಗಿ ರೂ. 45.00 ಕೋಟಿಗಳನ್ನು ಒದಗಿಸಬೇಕಿದೆ. ಇದುವರೆವಿಗೂ ಬಿಡುಗಡೆ ಮಾಡಿದ ಮೊತ್ತ (ಪ್ರಸಕ್ತ ವರ್ಷವೂ ಸೇರಿ) ರೂ. 13.00 ಕೋಟಿಗಳು. 2003–04ನೇ ಆಯವ್ಯಯದಲ್ಲಿ ಒದಗಣಿ ಮಾಡಲಾಗುವುದು.

ಈ) ಭಾರತೀಯ ವೈಮಾನಿಕ ಪ್ರಾಧಿಕಾರವು ರೂ. 55.26 ಕೋಟಿಗಳ ಅಂದಾಜು ವೆಚ್ಚದಲ್ಲಿ ಎಬಿ–310 ದರ್ಜೆಯ ವಿಮಾನಗಳ ಚಾಲನೆಗೆ ಸಹವರ್ತಿ ದಾರಿಯ ದಂಡೆಯೊಂದಿಗೆ ಹೊಸ ರನ್‌ವೇ ನಿರ್ಮಾಣಕ್ಕೆ ಮತ್ತು ಸಂಬಂಧಿತ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಿದೆ. ಕರ್ನಾಟಕ

ರಾಜ್ಯ ಸರ್ಕಾರವು ಭೂಸ್ವಾಧೀನ ಮತ್ತು ಇತರೆ ಬಾಬ್ತು ರೂ. 12.00 ಕೋಟಿಗಳನ್ನು ಖರ್ಚು ಮಾಡಿದೆ. ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರ ಆಯ್ಕೆಗಾಗಿ ಕರೆದಿದ್ದ ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದೆ. ಇಷ್ಟರೊಳಗೆ ಕಾಮಗಾರಿಯನ್ನು ವಹಿಸಿಕೊಡಲಾಗುವುದು.

ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ವ್ಯವಹಾರ

286 (235): ಶ್ರೀ ಯೋಗೀಶ್‌ಭಟ್ ಎನ್. (ಮಂಗಳೂರು) ಮಾನ್ಯ ಕಾರ್ಮಿಕ, ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳು ಎಷ್ಟು; ಎಷ್ಟು ಕೈಗಾರಿಕೆಗಳು ನಷ್ಟದಲ್ಲಿವೆ; ಎಷ್ಟು ಮುಚ್ಚಿವೆ ಇವುಗಳಿಗೆ ಕೊಡಬೇಕಾದ ಸಬ್ಸಿಡಿ ಹಣವೆಷ್ಟು; ಯಾವಾಗ ಕೊಡಲಾಗುವುದು;

ಆ) ಸಣ್ಣ ಕೈಗಾರಿಕಾ ಉತ್ಪನ್ನಗಳನ್ನು ಖರೀದಿಸಲು ಅವುಗಳಿಗೆ ಯೋಗ್ಯ ಬೆಲೆ ಸಿಗುವಂತೆ ಮಾಡಲು ಕೈಗೊಂಡ ಕ್ರಮಗಳೇನು;

ಇ) ಇವುಗಳು ಡೀಸಲ್, ಪೆಟ್ರೋಲ್, ಜನರೇಟರ್‌ಗಳ ಮೂಲಕ ಉತ್ಪಾದಿಸುವ ವಿದ್ಯುತ್‌ನ ಮೇಲಿನ ತೆರಿಗೆ ರದ್ದು ಪಡಿಸಬಹುದೇ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ, ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು)

ಅ) ದಿನಾಂಕ : 30.11.2003 ರ ಅಂತ್ಯಕ್ಕೆ ರಾಜ್ಯದಲ್ಲಿ 3,04,746 ಸಣ್ಣ ಕೈಗಾರಿಕೆಗಳು ನೋಂದಾಯಿತವಾಗಿರುತ್ತದೆ. ಇತ್ತೀಚೆಗೆ ಕೆಂದ್ರ ಸರ್ಕಾರದವರು ಸಣ್ಣ ಕೈಗಾರಿಕೆಗಳ ಗಣತಿ ಮಾಡಿದ್ದು, ಅಂತಿಮ ವರದಿಯು ಇನ್ನೂ ಪ್ರಕಟವಾಗಬೇಕಾಗಿದೆ. ಈ ಬಗ್ಗೆ ಬಂದಿರುವ ಪ್ರಾಥಮಿಕ ವರದಿಯ ಪ್ರಕಾರ (ಇಂಟಿಯರಿವ್ ರಿಪೋರ್ಟ್) ಶೇ 62.35 ರಷ್ಟು ಘಟಕಗಳು ಕಾರ್ಯ ನಿರ್ವಹಿಸುತ್ತಿರುವುದಾಗಿಯೂ, ಶೇ. 37.65 ರಷ್ಟು ಘಟಕಗಳು ಮುಚ್ಚಿರುವುದಾಗಿಯೂ ವರದಿಯಾಗಿದೆ. ಈ ಬಗ್ಗೆ ಸಂಪೂರ್ಣ ವಿವರಗಳು ಭಾರತ ಸರ್ಕಾರದಿಂದ ಸಣ್ಣ ಕೈಗಾರಿಕೆಗಳ ಗಣತಿ ಕಾರ್ಯದ ಅಂತಿಮ ವರದಿ ಪ್ರಕಟವಾದ ನಂತರ ದೊರಕುತ್ತದೆ. ದಿನಾಂಕ: 31.03.2003 ರವರೆಗೆ 18,279 ಘಟಕಗಳಿಗೆ ಒಟ್ಟು ರೂ. 40567.36 ಲಕ್ಷಗಳ ಸಹಾಯ ಧನ ಬಿಡುಗಡೆಗೆ ಬಾಕಿ ಇರುತ್ತದೆ. ಈ ಹಣವನ್ನು ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಜೇಷ್ಟತೆ ಆಧಾರದ ಮೇಲೆ ಸರ್ಕಾರದ ಆದೇಶದ ನಿಬಂಧನೆಗೊಳಪಟ್ಟು ಬಿಡುಗಡೆ ಮಾಡಲಾಗುವುದು. ಕೆ.ಎಸ್.ಎಫ್.ಸಿ. ಮುಖಾಂತರ ಬಾಂಡ್‌ಗಳನ್ನು ಬಿಡುಗಡೆ ಮಾಡಿ ಸಂಪನ್ಮೂಲ ಕ್ರೋಢೀಕರಿಸುವ ಕಾರ್ಯ ಜರುಗುತ್ತಿದ್ದು ಮಂಜೂರಾದ ಘಟಕಗಳಿಗೆ ಹಣ ಬಿಡುಗಡೆ ಮಾಡಲಾಗುವುದು.

ಆ) ಸಣ್ಣ ಕೈಗಾರಿಕಾ ಉತ್ಪನ್ನಗಳನ್ನು ಖರೀದಿಸಲು ಹಾಗೂ ಅವುಗಳಿಗೆ ಯೋಗ್ಯ ಬೆಲೆ ಸಿಗುವಂತೆ ಮಾಡಲು ರಾಜ್ಯದ ಕೈಗಾರಿಕಾ ನೀತಿ 2001–06ರಲ್ಲಿ ಅನೇಕ ಯೋಜನೆಗಳನ್ನು ಅಳವಡಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

1. ತಂತ್ರಜ್ಞಾನ ಉನ್ನತೀಕರಣ
2. ಗುಣಮಟ್ಟ ಉನ್ನತೀಕರಣ
3. ಮೂಲಭೂತ ಸೌಕರ್ಯ
4. ವ್ಯವಹಾರ ಪರಿಸರ ಅನಿಯಂತ್ರಣ